**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-754/2022 **PW**: 1

**ದಿಃ 06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಆರ್ ಜಿ ಬಿ ವಕೀಲರಿಂದ**

**1.** ದಾವಲ ಪಡಸಾಲರವರು ನನ್ನ ಮನೆಯವರಾಗಬೇಕು. 2 ನೇ ಅರ್ಜಿದಾರರು ನನ್ನ ಅಕ್ಕಳಾಗಬೇಕು. ನಾಲ್ಕು ಮತ್ತು ಐದನೇಯ ಅರ್ಜಿದಾರರು ನಿಮ್ಮ ಬಳಿಯೇ ಇರುತ್ತಾರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 5 ನೇ ಅರ್ಜಿದಾರರಿಗೆ ಇಬ್ಬರು ಮಕ್ಕಳು, ಅವರೆಂದರೆ ಅಮೀತ ಮತ್ತು ಜ್ಯೋತಿ. ಸದರಿ ಮೃತ ಅಮೀತ ನಡೆಸುತ್ತಿದ್ದ ಬೈಕ ನನ್ನ ಮನೆಯವರು ಕೆಲಸ ಮಾಡುತ್ತಿದ್ದ ಕಂಪನಿಯ ಹೊಸ ಬೈಕ ಆಗಿದ್ದು ಅದನ್ನು ಗೋಕುಲದಿಂದ ಕೇಶ್ವಾಪೂರಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ನನ್ನ ಮನೆಯವರು ಶಾಂತೇಶ ಹೊಂಡಾ ಪ್ರೈವೇಟ ಲಿಮೀಟಡನಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದರು. ಈ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಅಪಘಾತ ಆಯಿತು ಎಂದು ಹೇಳಿದ್ದು ನಾನು ಅದನ್ನು ಖುದ್ದಾಗಿ ನೋಡಿಲ್ಲವೆಂದರೆ ಸರಿ. ಸದರಿ ಅಪಘಾತ ಹೇಗೆ ಆಯಿತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಪೋಲೀಸರ ವರದಿ ಪ್ರಕಾರ ಸಮೀರ ಎಂಬುವವರು ಗಾಡಿಯನ್ನು ವೇಗವಾಗಿ ಓಡಿಸಿಕೊಂಡು ಬಂದಿದ್ದರಿಂದ ಆಗಿದೆ ಎಂದು ನುಡಿಯುತ್ತಾರೆ. ಅಪಘಾತವಾದ ಬಗ್ಗೆ ನನಗೆ ವಿಷಯವನ್ನು ಸಾರ್ವಜನಿಕರು ಪೋನ ಮೂಲಕ ತಿಳಿಸಿರುತ್ತಾರೆ. ಅಪಘಾತವಾದ ತಕ್ಷಣ ಅವರನ್ನು ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಸದರಿ ಆಸ್ಪತ್ರೆಯಲ್ಲಿ ಎಂ ಎಲ್ ಸಿ ನೊಂದಾದ ಬಗ್ಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿ ಎಲ್ಲ ದಾಖಲೆಗಳನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ನನ್ನ ಮನೆಯವರು ಕೆಎಂಸಿಯಲ್ಲಿಯೆ ಎಲ್ಲ ಚಿಕಿತ್ಸೆ ಪಡೆದಿರುತ್ತಾರೆಂದರೆ ಸಾಕ್ಷಿ ಇಲ್ಲ ದಿಃ05-05-2025 ಕ್ಕೆ ಬಾಲಾಜಿ ಆಸ್ಪತ್ರೆಗೆ ವರ್ಗಾವಣೆ ಮಾಡಿದೇವು ಎನ್ನುತ್ತಾರೆ. ಸದರಿ ಕೆಎಂಸಿಯವರು ನಿಮಗೆ ಅಲ್ಲಿಗೆ ಕರೆದುಕೊಂಡು ಹೋಗಿರಿ ಎಂದು ಹೇಳಿದರಾ ಅಥವಾ ನೀವೆ ಕರೆದುಕೊಂಡು ಹೋಗಿದ್ದೀರಿ ಎಂದರೆ ಸಾಕ್ಷಿ ನಮ್ಮ ಮನೆಯವರ ಕಂಡಿಷನ ಬಹಳ ಕಠಿಣವಾಗಿದ್ದರಿಂದ ಮತ್ತು ನಮ್ಮ ಇಚ್ಛೆ ಪ್ರಕಾರ ನಾವೆ ಕರೆದುಕೊಂಡು ಬಂದಿರುತ್ತೇವೆ ಎನ್ನುತ್ತಾರೆ. ಕೆಎಂಸಿಯಲ್ಲಿ ಇರುವವರೆಗೂ ಅವರಿಗೆ ಉಚಿತ ಚಿಕಿತ್ಸೆ

ಕೊಡುತ್ತಿದ್ದರು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 25 ಲಕ್ಷಗಳಷ್ಟು ಖರ್ಚು ಮಾಡಿರುತ್ತೇವೆಂದು ಹೇಳಿದ್ದು ಅಷ್ಟು ಹಣವನ್ನು ಖರ್ಚು ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಅಷ್ಟು ಖರ್ಚು ಮಾಡಿದ್ದೇವೆ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ಬಿಲ್ ಗಳು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ತೋರಿಸುವುದಿಲ್ಲವೆಂದರೆ ಸಾಕ್ಷಿ ನಾನು ಇನ್ನು ಕೂಡಾ 50 ಸಾವಿರದಷ್ಟು ಬಿಲ್ ತುಂಬಬೇಕಾಗಿದ್ದು ಕಂಪನಿ ನನಗೆ ಕೊಟ್ಟಿಲ್ಲವಾದ ಕಾರಣ ನಾನು ಬಿಲ್ ಪೆಂಡಿಂಗ ಇಟ್ಟಿದ್ದೇನೆ ಎನ್ನುತ್ತಾರೆ. ಕಂಪನಿಯವರು ನಿಮಗೆ ಇನ್ಸೂರನ್ಸ ಹಣ, ಮೆಡಿಕಲ್ ಬಿಲ್ ಇಂತಹವುಗಳನ್ನು ಕೊಡಲಿಲ್ಲವೆಂದರೆ ಸಾಕ್ಷಿ ಇನ್ನು ಕೊಟ್ಟಿಲ್ಲ ಎನ್ನುತ್ತಾರೆ. ಅಮೀತ್ ಇವರಿಗೆ 1 ಲಕ್ಷ ರೂಪಾಯಿ ಮುಂದೆ ದುಡಿಯುತ್ತಿದ್ದರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿಯವರಿಗೆ ತಿಂಗಳಿಗೆ 36 ಸಾವಿರದಿಂದ 40 ಸಾವಿರ ದುಡಿಯುತ್ತಿದ್ದರು ಎಂದು ತೋರಿಸಲು ವೇತನ ಪ್ರಮಾಣ ಪತ್ರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿಯವರಿಗೆ 1 ಲಕ್ಷ ರೂಪಾಯಿ ಮುಂದೆ ದುಡಿಯುತ್ತಾರೆಂದು ಅವರು ಇದ್ದಂತಹ ಕಂಪನಿಯಲ್ಲಿ ದುಡಿಯುವಂತಹ ಸೌಲಭ್ಯ ಇರಲಿಲ್ಲವೆಂದರೆ ಸಾಕ್ಷಿ ಅವರು ಬದುಕಿದ್ದರೆ ಇನ್ನು ಕೂಡಾ ದುಡಿಯುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

2. ಅಪಘಾತವಾಗಿದೆ ಎಂದು ಹೇಳಲಾದ ಘಟನೆಯಲ್ಲಿ ನನ್ನ ಮನೆಯವರ ತಪ್ಪು ಕೂಡಾ ಇದೆ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ನಾನು ಸಲ್ಲಿಸಿರುವ ದಾಖಲೆಗಳನ್ನು ನೋಡಿಕೊಂಡಿರುತ್ತೇನೆ. ಚಾರ್ಜಶೀಟ ಪ್ರಕಾರ ಸಮೀರ ಎನ್ನುವವರಿಗೆ ಡಿಎಲ್ ಇಲ್ಲ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿ ಅವರಿಗೆ ಲೈಸನ್ಸ ಇತ್ತು ಎಂದು ನಮಗೆ ಹೇಳಿದ್ದರು ಎನ್ನುತ್ತಾರೆ. ಸದರಿಯವರಿಗೆ ಲೈಸನ್ಸ ಇರದ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸಾಕ್ಷಿ ಅವರಿಗೆ ಲೈಸನ್ಸ ಇತ್ತು ಎಂದು ಹೇಳಿದ್ದರು ಎನ್ನುತ್ತಾರೆ.

3. ನನ್ನ ಅರ್ಜಿಯಲ್ಲಿ ನಾನು ಎನು ಕೆಲಸ ಮಾಡುತ್ತಿದ್ದೆ ಎಂದು ಎಷ್ಟು ಆದಾಯ ಇತ್ತು ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ. ನೀವು ಆದಾಯ ತೆರಿಗೆ ಪಾವತಿದಾರಳಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಎನೂ ಅಪಘಾತದಿಂದ ಗಾಯಗಳಾಗಿದ್ದು ಎಂದು ಹೇಳಿದ್ದು ಅವುಗಳು ಈಗಾಗಲೇ ಗುಣಮುಖವಾಗಿವೆ ಎಂದರೆ ಸಾಕ್ಷಿ ಸ್ವಲ್ಪ ಗುಣಮುಖವಾಗಿವೆ ಇನ್ನೂ ಸ್ವಲ್ಪ ಹಾಗೆಯೇ ಇದೆ ಎನ್ನುತ್ತಾರೆ. ಸುಚಿರಾಯ ಆಸ್ಪತ್ರೆಯಲ್ಲಿ ವೈದ್ಯರು ಹೇಳಿದ ಪ್ರಕಾರ ಹೆಚ್ಚಿನ ಚಿಕಿತ್ಸೆ ಪಡೆದಿದ್ದಿರೋ ಇಲ್ಲವೂೕ ಎಂದರೆ ಸಾಕ್ಷಿ ಈಗಲೂ ಕೂಡಾ ಚಿಕಿತ್ಸೆ ಪಡೆಯುತ್ತಿದ್ದೇನೆ

ಎನ್ನುತ್ತಾರೆ. ಈ ಬಗ್ಗೆ ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಈಗ ಮೆಡಿಸಿನ ಅಷ್ಟೇ ತೆಗೆದುಕೊಳ್ಳುತ್ತಿದ್ದೇನೆ ಎನ್ನುತ್ತಾರೆ. ನಾನು ಮೆಡಿಸಿನ ತೆಗೆದುಕೊಳ್ಳುತ್ತಿರುವ ಬಗ್ಗೆ ವೈದ್ಯರಿಂದ ಪ್ರಿಸ್ಕ್ರಪ್ಷನ ಇದೆಯಾ ಎಂದರೆ ಸಾಕ್ಷಿ ಪ್ರಿಸ್ಕಪ್ಷನ ಗುಜರಾತನಲ್ಲಿ ಇದೆ ಎನ್ನುತ್ತಾರೆ. ದಿಃ06.04.2022 ರಂದು ನನಗೆ ಅಪಘಾತವಾಗಿದೆ ಎಂದು ಹೇಳಿದ್ದು ದಿಃ12.04.2022 ರಂದು ನಾನು ಸುಚಿರಾಯ ಆಸ್ಪತ್ರೆಯಿಂದ ಡಿಸ್ಚಾರ್ಜ ಆಗಿದ್ದೇನೆ. ನನಗೆ ಅದರ ನಿಖರವಾದ ದಿನಾಂಕ ಹೇಳಲು ಆಗುವದಿಲ್ಲ. ನಾನು ಡಿಸ್ಚಾರ್ಜ ಆಗುವ ಸಮಯದಲ್ಲಿ ವೈದ್ಯರು ನನಗೆ ಹೆಚ್ಚಿನ ಚಿಕಿತ್ಸೆ ಬಗ್ಗೆ ಸೂಚಿಸಿರಲಿಲ್ಲ ಎಂದರೆ ಸಾಕ್ಷಿ ಕೇವಲ ವೈದ್ಯರು ನಾನು ಡಿಸ್ಚಾರ್ಜ ಆದ ನಂತರ ಪೇಯನ ಕಿಲ್ಲರ ಮಾತ್ರೆ ಕೊಟ್ಟಿದ್ದರೆಂದು ನುಡಿಯುತ್ತಾರೆ. ನನಗೆ ಯಾವದೇ ತೊಂದರೆ ಇಲ್ಲ ಎಂದು ಗೊತ್ತಾದ ನಂತರ ಸುಚಿರಾಯು ಆಸ್ಪತ್ರೆ ವೈದ್ಯರು ನನ್ನನ್ನು ಡಿಸ್ಚಾರ್ಜ ಮಾಡಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನಗೆ ಆದ ಗಾಯಗಳಿಂದ ಯಾವದೇ ರೀತಿ ಅಂಗನ್ಯೂನತೆ ಇಲ್ಲದ ಕಾರಣ ನಾನು ಕೇಳಿರುವಂತಹ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸಾಕ್ಷಿ ಯಾವದೇ ಅಂಗನ್ಯೂನತೆ ಇಲ್ಲ ಎನ್ನುತ್ತಾರೆ. ನಾನು ಹಾಜರುಪಡಿಸಿರುವ 180000/- ರೂಗಳ ಬಿಲ್ಲನ್ನು ಈ ಕೇಸಗೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ.

(1, 2 ಮತ್ತು 4 ನೇ ಎದುರುದಾರ ಪರ ವಕೀಲರು ಮೇಲೆ ಹೇಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವದಾಗಿ ಕೋರಿರುತ್ತಾರೆ. ಕಾರಣ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.)

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**